# ಕ್ಯಾಲಿಫೋರ್ನಿಯಾ

## ಅಮೆರಿಕದ ಲಾಕ್ಷಾಗೃಹ

ಅಮೆರಿಕದ ನಾಜೂಕುತನ ಹಾಗೂ ಐಷಾರಾಮಿ ಸಂಸ್ಕೃತಿ ಮಿಳಿತಗೊಂಡಿರುವ ಕ್ಯಾಲಿಫೋರ್ನಿಯಾ, ಅನನ್ಯ ಭೂದೃಶ್ಯಗಳಿಗೂ ಪ್ರಸಿದ್ಧ. ಈ ವಿಶ್ವಪ್ರಸಿದ್ಧ ನಗರ ಕಾಡ್ಗಿಚ್ಚಿಗೆ ಸಿಕ್ಕು ಕಂಗೆಟ್ಟಿರುವ ಸಂದರ್ಭದಲ್ಲಿ, ಕ್ಯಾಲಿಫೋರ್ನಿಯಾ ಕುರಿತ ಆರ್ದ್ರ ನೆನಪುಗಳು ಇಲ್ಲಿವೆ. ಈ ನೆನಪುಗಳ ಮೆರವಣಿಗೆ, ಕ್ಯಾಲಿಫೋರ್ನಿಯಾದ ಅನನ್ಯತೆಯ ಜೊತೆಗೆ ಇಂದಿನ ಅದರ ದುರಂತಕ್ಕೆ ಕಾರಣಗಳನ್ನು ವಿಶ್ಲೇಷಿಸುತ್ತದೆ; ಪ್ರಕೃತಿ ವಿಕೋಪಗಳ ಕುರಿತು ಸಾರ್ವಜನಿಕ ವಿವೇಕವೊಂದು ರೂಪುಗೊಳ್ಳಬೇಕಾದ ಅಗತ್ಯವನ್ನು ಕಾಣಿಸುವಂತಿದೆ.

**■ ರಹಮತ್ ತರೀಕೆರೆ**

ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯವು ಕಾಡ್ಗಿಚ್ಚಿನ ಕೆನ್ನಾಲಿಗೆಯಿಂದ ಗಾಸಿಗೊಂಡಿದೆ. ಕಾಡು ಸುಟ್ಟು ಪಶುಪಕ್ಷಿಗಳ ಪ್ರಾಣ ಹಾರಿಹೋಗಿದೆ. ಮನೆಗಳು ಬೂದಿಯಾಗಿವೆ. ಜನ ಗುಳೆ ಹೊರಟಿದ್ದಾರೆ. ಹೊಗೆಯ ಕಾರ್ಮೋಡ ಗಗನತಳವನ್ನು ಆವರಿಸಿದೆ. ನಿಸರ್ಗದ ಕೋಪವು ಜಗತ್ತಿನ ಅತಿದೊಡ್ಡ ಆರ್ಥಿಕ ಮತ್ತು ಮಿಲಿಟರಿ ಶಕ್ತಿಯಾಗಿರುವ ಅಮೆರಿಕೆಯನ್ನು ಪರದಾಡುವಂತೆ ಮಾಡಿದೆ. ಈ ಹೊತ್ತಲ್ಲಿ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಕೆಲವು ದಿನವಿದ್ದ, ಅಲ್ಲಿನ ಕಾಡುಗಳಲ್ಲಿ ತಿರುಗಾಡಿದ ನೆನಪುಗಳು ಮರುಕಳಿಸುತ್ತಿವೆ.

ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪನದ ಆಹ್ವಾನ ಬಂದಾಗ, ನಾನು–ಬಾನು ಹೋದೆವು. ಚಳಿಗಾಲ ಮುಗಿದು ಬೇಸಿಗೆ ಕಾಲಿಟ್ಟಿದ್ದರೂ ಗದಗುಟ್ಟಿಸುವ ಚಳಿ ಇತ್ತು. ಬೆಂಗಳೂರಿನಿಂದ ಹೊರಟ ನಮ್ಮ ವಿಮಾನ, ಚೀನಾ ಜಪಾನ್ ಮೇಲಿಂದ ಹಾದು, ಪೆಸಿಫಿಕ್ ಸಾಗರದ ಅಗಾಧ ಜಲರಾಶಿಯ ಮೇಲೆ ಹಾರುತ್ತ, ಸ್ಯಾನ್‌ಫ್ರಾನ್ಸಿಸ್ಕೊ ಶಹರವನ್ನು ಮುಟ್ಟುವಾಗ ಸಂಜೆಯಾಗಿತ್ತು. 14 ಸಾವಿರಕ್ಕೂ ಮಿಕ್ಕಿದ ಕಿಲೋಮೀಟರಿನ ಹದಿನೆಂಟು ಗಂಟೆಯ ಪಯಣ ಬಳಲಿಸಿತ್ತು. ಯಾವಾಗ ನೆಲಕ್ಕೆ ಇಳಿದು ನಡೆದಾಡೇವು ಅನಿಸುವಂತೆ ಮೈಕೈ ಜೋಮು ಹಿಡಿದಿದ್ದವು. ಬಾನಲ್ಲಿ ಸೂರ್ಯ ಕೆಂಡದುಂಡೆಯಾಗಿ ಮುಳುಗಲು ತಯಾರಿ ನಡೆಸುತ್ತಿದ್ದನು. ಕ್ಯಾಲಿಫೋರ್ನಿಯಾದ ವಿಶಿಷ್ಟ ಕಾಡುಬೆಟ್ಟಗಳು ಗೋಚರಿಸಿದವು. ವಿಮಾನವು ಕಡಲಿನೊಳಗೆ ಧುಮುಕುತ್ತದೆಯೊ ಎಂಬಂತೆ ಹಿನ್ನೀರಿನ ಮೇಲೆ ರೆಕ್ಕೆಬಡಿಯದ ಹದ್ದಿನಂತೆ ಕೆಳಗಿಳಿಯಿತು.

ಸ್ಯಾನ್‌ಫ್ರಾನ್ಸಿಸ್ಕೊದ ಗಗನಚುಂಬಿ ಕಟ್ಟಡಗಳನ್ನೂ ಪ್ರಖ್ಯಾತವಾದ ಗೋಲ್ಡನ್ ಬ್ರಿಜ್ಜನ್ನೂ ಮೇಲಿನಿಂದ ನೋಡುವಾಗ, ಅಮೆರಿಕದ ಚರಿತ್ರೆ ಕಣ್ಣೆದುರು ಹಾಯಿತು. ಕೊಲಂಬಸನು ಮಾಡಿದ ಭೂಖಂಡಗಳ ಹುಡುಕಾಟದ ಪರಿಣಾಮ, ಇಂಗ್ಲೆಂಡಿನ ಜನ ಅಮೆರಿಕಕ್ಕೆ ತಂಡಗಳಾಗಿ ಧಾವಿಸಿದರು. (ಹೀಗೆ ಬರುವಾಗಲೇ ಟೈಟಾನಿಕ್ ಹಡಗಿನ ದುರಂತವಾಗಿದ್ದು.) ಬಂದವರು ಇಲ್ಲಿನ ಮೂಲನಿವಾಸಿಗಳನ್ನು ಕೊಂದು, ಅವರ ನೆಲ ಕಾಡು ಹೊಳೆಗಳನ್ನು ಕಿತ್ತುಕೊಂಡರು. ಕಪ್ಪುಜನರನ್ನು ಆಫ್ರಿಕಾದಿಂದ ಪಶುಗಳಂತೆ ಸಾಗಿಸಿ ತಂದು ಗುಲಾಮರನ್ನಾಗಿ ದುಡಿಸಿದರು. ಇಂಗ್ಲೆಂಡಿನ ವಸಾಹತುಶಾಹಿಯ ವಿರುದ್ಧ ವೀರೋಚಿತವಾಗಿ ಹೋರಾಡಿ ಸ್ವಾತಂತ್ರ್ಯ ಪಡೆದರು. (ಇದಕ್ಕಾಗಿಯೇ ಟಿಪ್ಪು ಅವರನ್ನು


ಕಾಡುಗಳಲ್ಲಿ ಬೆಳೆವ ಹೂ ಕಳೆ



ಸ್ಯಾನ್‌ಫ್ರಾನ್ಸಿಸ್ಕೊದ ಗಗನಚುಂಬಿ ಕಟ್ಟಡಗಳು